# ಬೈಟ್ಸ್‌ನ ಆರನೇ ವಾರ್ಷಿಕ ಸಮಾವೇಶದಲ್ಲಿ ವಿಡಿಐಟಿ



**ಹಳಿಯಾಳ:** ಬೋರ್ಡ್ ಆಫ್ ಐ ಟಿ ಎಜುಕೇಶನಲ್ ಸ್ಟ್ಯಾಂಡರ್ಡ್ (ಬೈಟ್ಸ್) ನ ಆರನೇ ಸಮಾವೇಶವನ್ನು ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್ ನಲ್ಲಿ ಮಾರ್ಚ್ 1 ಮತ್ತು 2 ರಂದು ಆಯೋಜಿಸಲಾಗಿತ್ತು.

ಹಳಿಯಾಳದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯವು ಸಮಾವೇಶದಲ್ಲಿ ಭಾಗವಹಿಸಿತ್ತು. ಸಮಾವೇಶದಲ್ಲಿ ಮಹಾವಿದ್ಯಾಲಯದ ಪರವಾಗಿ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಬೈಟ್ಸ್ ನ ಪ್ರಮಾಣ ಪತ್ರವನ್ನು ಸ್ವೀಕರಿಸಿದರು. ಮಹಾವಿದ್ಯಾಲಯವು ಕಳೆದ ಒಂದು ವರ್ಷದಿಂದ ಬೈಟ್ಸ್ ನ ಸದಸ್ಯತ್ವ ಹೊಂದಿದ್ದು, ವಿದ್ಯಾರ್ಥಿಗಳಿಗೆ ಅವಶ್ಯವಿರುವ ಕೌಶಲ್ಯಗಳನ್ನು ನೀಡುತ್ತಾ ಬಂದಿದೆ. ಈ ಸಮ್ಮೇಳನದಲ್ಲಿ ಕೈಗಾರಿಕೆ 5.0, ಕೈಗಾರಿಕಾ ವಲಯದಲ್ಲಿ ಕೃತಕ ಬುದ್ಧಿಮತ್ತೆಯ ಉಪಯೋಗ, ವಿದ್ಯುತ್ ಚಾಲಿತ ವಾಹನದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಕುರಿತಾಗಿ ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು.

ಇನ್ಫೋಸಿಸ್ ಸಂಸ್ಥೆಯ ಉಪಾಧ್ಯಕ್ಷ ವಿನಾಯಕ ಹೆಗಡೆ ಅವರನ್ನು ಭೇಟಿ ಮಾಡಿ ಪ್ರಾಚಾರ್ಯರು ಇನ್ಫೋಸಿಸ್ ಸಂಸ್ಥೆ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಕೈಗೊಂಡಿರುವ ಹಲವು ಯೋಜನೆಗಳ ಕುರಿತಾಗಿ ಮಾಹಿತಿ ಪಡೆದುಕೊಂಡರು.

ಈ ಸಮ್ಮೇಳನದಲ್ಲಿ ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳು ಭಾಗವಹಿಸಿದ್ದವು. ಅಕಾಡೆಮಿಕ್ ಡೀನ್ ಡಾ. ವೆಂಕಟೇಶ ಶಂಕರ್, ಎ ಐ ಅಂಡ್ ಎಂ ಎಲ್ ವಿಭಾಗದ ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ಹಾಗೂ ಪ್ರೊ. ಪ್ರಾಣೇಶ ಕುಲಕರ್ಣಿ ಮಹಾವಿದ್ಯಾಲಯದ ಪರವಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

# ಬೈಟ್ಸ್‌ನ ಆರನೇ ವಾರ್ಷಿಕ ಸಮಾವೇಶದಲ್ಲಿ ವಿಡಿಐಟಿ

**ಶಿರಸಿ ಸಮಾಚಾರ ⏭ ಹಳಿಯಾಳ:** ಬೋರ್ಡ್ ಆಫ್ ಐಟಿ ಎಜುಕೇಶನಲ್ ಸ್ಟ್ಯಾಂಡರ್ಡ್ (ಬೈಟ್ಸ್ )ನ ಆರನೇ ಸಮಾವೇಶವನ್ನು ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್ ನಲ್ಲಿ ಮಾರ್ಚ್ 1 ಮತ್ತು 2ರಂದು ಆಯೋಜಿಸಲಾಗಿತ್ತು.



ಹಳಿಯಾಳದ ಕೆಎಲ್ಎಸ್ ವಿಡಿಐಟಿ ಮಹಾವಿದ್ಯಾಲಯವು ಈ ಸಮಾವೇಶದಲ್ಲಿ ಭಾಗವಹಿಸಿತು. ಈ ಸಮಾವೇಶದಲ್ಲಿ ಮಹಾವಿದ್ಯಾಲಯದ ಪರವಾಗಿ ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಬೈಟ್ಸ್‌ನ ಪ್ರಮಾಣ ಪತ್ರವನ್ನು ಸ್ವೀಕರಿಸಿದರು. ಮಹಾವಿದ್ಯಾಲಯವು ಕಳೆದ ಒಂದು ವರ್ಷದಿಂದ ಬೈಟ್ಸ್ ನ ಸದಸ್ಯತ್ವ ಹೊಂದಿದ್ದು, ವಿದ್ಯಾರ್ಥಿಗಳಿಗೆ ಅವಶ್ಯವಿರುವ ಕೌಶಲ್ಯಗಳನ್ನು ನೀಡುತ್ತಾ ಬಂದಿದೆ. ಈ ಸಮ್ಮೇಳನದಲ್ಲಿ ಕೈಗಾರಿಕೆ 5.0, ಕೈಗಾರಿಕಾ ವಲಯದಲ್ಲಿ ಕೃತಕ ಬುದ್ಧಿಮತ್ತೆಯ ಉಪಯೋಗ, ವಿದ್ಯುತ್ ಚಾಲಿತ ವಾಹನದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಕುರಿತಾಗಿ ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು.

ಇನ್ಫೋಸಿಸ್ ಸಂಸ್ಥೆಯ ಉಪಾಧ್ಯಕ್ಷ ವಿನಾಯಕ ಹೆಗಡೆ ಇವರನ್ನು ಭೇಟಿ ಮಾಡಿ ಪ್ರಾಚಾರ್ಯರು ಇನ್ಫೋಸಿಸ್ ಸಂಸ್ಥೆ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಕೈಗೊಂಡಿರುವ ಹಲವು ಯೋಜನೆಗಳ ಕುರಿತಾಗಿ ಮಾಹಿತಿ ಪಡೆದುಕೊಂಡರು. ಈಗಾಗಲೇ ಇನ್ಫೋಸಿಸ್‌ನ ಸ್ಪ್ರಿಂಗ್ ಬೋರ್ಡ್ ಕಾರ್ಯಕ್ರಮದಡಿಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕೌಶಲ್ಯ ಅಭಿವೃದ್ಧಿಯ ಹಲವು ಕೋರ್ಸ್‌ಗಳನ್ನು ಉಚಿತವಾಗಿ ಪಡೆದುಕೊಂಡಿದ್ದಾರೆ. ಈ ಸಮ್ಮೇಳನದಲ್ಲಿ ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳು ಭಾಗವಹಿಸಿದ್ದವು. ಅಕಾಡೆಮಿಕ್ ಡೀನ್ ಡಾ. ವೆಂಕಟೇಶ ಶಂಕರ್, ಎ ಐ ಅಂಡ್ ಎಂ ಎಲ್ ವಿಭಾಗದ ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ಹಾಗೂ ಪ್ರೊ. ಪ್ರಾಣೇಶ ಕುಲಕರ್ಣಿ ಮಹಾವಿದ್ಯಾಲಯದ ಪರವಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

# ಬೈಟ್ಸ್‌ನ ಆರನೇ ವಾರ್ಷಿಕ ಸಮಾವೇಶದಲ್ಲಿ ವಿಡಿಐಟಿ ಭಾಗಿ




**e - ಉತ್ತರ ಕನ್ನಡ ವರದಿ**

**ಹಳಿಯಾಳ:** ಮಾ.1,2ಕ್ಕೆ ಮೈಸೂರಿನ ಇನ್ಫೋಸಿಸ್ ಕ್ಯಾಂಪಸ್‌ನಲ್ಲಿ ಆಯೋಜಿಸಲಾಗಿದ್ದ ಬೋರ್ಡ್ ಆಫ್ ಐಟಿ ಎಜುಕೇಶನಲ್ ಸ್ಟ್ಯಾಂಡರ್ಡ್ (ಬೈಟ್ಸ್ ) ನ ಆರನೇ ಸಮಾವೇಶದಲ್ಲಿ ಹಳಿಯಾಳದ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯವು ಭಾಗವಹಿಸಿತು.

ಈ ಸಮಾವೇಶದಲ್ಲಿ ಮಹಾವಿದ್ಯಾಲಯದ ಪರವಾಗಿ ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ಬೈಟ್ಸ್ ನ ಪ್ರಮಾಣ ಪತ್ರವನ್ನು ಸ್ವೀಕರಿಸಿದರು. ಮಹಾವಿದ್ಯಾಲಯವು ಕಳೆದ ಒಂದು ವರ್ಷದಿಂದ ಬೈಟ್ಸ್ ನ ಸದಸ್ಯತ್ವ ಹೊಂದಿದ್ದು , ವಿದ್ಯಾರ್ಥಿಗಳಿಗೆ ಅವಶ್ಯವಿರುವ ಕೌಶಲ್ಯಗಳನ್ನು ನೀಡುತ್ತಾ ಬಂದಿದೆ. ಈ ಸಮ್ಮೇಳನದಲ್ಲಿ ಕೈಗಾರಿಕೆ 5.0, ಕೈಗಾರಿಕಾ ವಲಯದಲ್ಲಿ ಕೃತಕ ಬುದ್ಧಿಮತ್ತೆಯ ಉಪಯೋಗ, ವಿದ್ಯುತ್ ಚಾಲಿತ ವಾಹನದಲ್ಲಿ ಕೃತಕ ಬುದ್ಧಿಮತ್ತೆಯ ಬಳಕೆ ಕುರಿತಾಗಿ ಮಾಹಿತಿ ವಿನಿಮಯ ಮಾಡಿಕೊಳ್ಳಲಾಯಿತು.

ಇನ್ಫೋಸಿಸ್ ಸಂಸ್ಥೆಯ ಉಪಾಧ್ಯಕ್ಷ ವಿನಾಯಕ ಹೆಗಡೆ ಇವರನ್ನು ಭೇಟಿ ಮಾಡಿ ಪ್ರಾಚಾರ್ಯರು ಇನ್ಫೋಸಿಸ್ ಸಂಸ್ಥೆ ವಿದ್ಯಾರ್ಥಿಗಳ ಕೌಶಲ್ಯ ಅಭಿವೃದ್ಧಿಗೆ ಕೈಗೊಂಡಿರುವ ಹಲವು ಯೋಜನೆಗಳ ಕುರಿತಾಗಿ ಮಾಹಿತಿ ಪಡೆದುಕೊಂಡರು. ಈಗಾಗಲೇ ಇನ್ಫೋಸಿಸ್ ನ ಸ್ಪ್ರಿಂಗ್ ಬೋರ್ಡ್ ಕಾರ್ಯಕ್ರಮದಡಿಯಲ್ಲಿ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಕೌಶಲ್ಯ ಅಭಿವೃದ್ಧಿಯ ಹಲವು ಕೋರ್ಸ್‌ಗಳನ್ನು ಉಚಿತವಾಗಿ ಪಡೆದುಕೊಂಡಿದ್ದಾರೆ. ಈ ಸಮ್ಮೇಳನದಲ್ಲಿ ರಾಜ್ಯದ ವಿವಿಧ ತಾಂತ್ರಿಕ ಮಹಾವಿದ್ಯಾಲಯಗಳು ಭಾಗವಹಿಸಿದ್ದವು. ಅಕಾಡೆಮಿಕ್ ಡೀನ್ ಡಾ. ವೆಂಕಟೇಶ ಶಂಕರ್, ಎ ಐ ಅಂಡ್ ಎಂ ಎಲ್ ವಿಭಾಗದ ಮುಖ್ಯಸ್ಥೆ ಡಾ. ಪೂರ್ಣಿಮಾ ರಾಯ್ಕರ್ ಹಾಗೂ ಪ್ರೊ. ಪ್ರಾಣೇಶ ಕುಲಕರ್ಣಿ ಮಹಾವಿದ್ಯಾಲಯದ ಪರವಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.